ಕರ್ನಾಟಕ ಸರ್ಕಾರ

**ಲೋಕೋಪಯೋಗಿ ಇಲಾಖೆ**

**ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ, ದಾವಣಗೆರೆ**

ವಿಭಾಗ ಕಛೇರಿ, ಪಿ.ಬಿ. ರಸ್ತೆ,
ದಾವಣಗೆರೆ-577002

ದೂರವಾಣಿ ಸಂಖ್ಯೆ : 08192-234951,231530
ಫ್ಯಾಕ್ಸ್ : 08192-234951
ಇ-ಮೇಲ್ : eedvg@kpwd.gov.in

ಸಂಖ್ಯೆ : ಸಕಾಲ/ಲೋಣ/ಉವಿದ್ಯಾ/ಸಇಂ/ರಸ್ತೆ/2021-22./748

ದಿನಾಂಕ:27/07/2021

ಇವರಿಗೆ,

ಅಧ್ಯಕ್ಷರು.
ನೆಕ್ಸಜೆನ್ ಎಜುಕೇಷನಲ್ ಟ್ರಸ್ಟ
ಶ್ರೀ ಚೈತನ್ಯ ಪಿ.ಯು. ಕಾಲೇಜ್.
ಡಿಸಿಎಮ್. ರೈಲ್ವೆ ಸೇತುವೆ ಪಕ್ಕ. ಅವರಗೆರೆ.
ದಾವಣಗೆರೆ-577003.

ಮಾನ್ಯರೇ,

**ವಿಷಯ :** ಕಾಲೇಜು ಕಟ್ಟಡಕ್ಕೆ ಕಟ್ಟಡ ಸುರಕ್ಷತೆ ದೃಢೀಕರಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ :** 1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 19/09/2020ರಂದು ನಡೆದ ಸಭೆಯ ನಡವಳಿಗಳು.
2) ಸರ್ಕಾರದ ಕಾರ್ಯದರ್ಶಿಗಳು - ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರ ಪತ್ರ ದಿನಾಂಕ :ಲೋಇ/59/ಬಿಇಡಿ/2019 ದಿನಾಂಕ: 29/10/2020.
3) ತಮ್ಮ ಕಚೇರಿ ಪತ್ರ ದಿನಾಂಕ : 22/07/2021.
4) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಇ ಉಪವಿಭಾಗ, ದಾವಣಗೆರೆ ಇವರ ಪತ್ರ ಸಂಖ್ಯೆ:434/2021-22 ದಿನಾಂಕ:26/07/2021.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೆಕ್ಸಜೆನ್ ಎಜುಕೇಷನಲ್ ಟ್ರಸ್ಟ, ದಾವಣಗೆರೆ ಸಂಸ್ಥೆಯ ವತಿಯಿಂದ ಶ್ರೀ ಚೈತನ್ಯ ಪಿ.ಯು. ಕಾಲೇಜ್, ದಾವಣಗೆರೆ ಸದರಿ ಕಟ್ಟಡದಲ್ಲಿ ನಡೆಸಲಾಗುತ್ತಿದ್ದು, ಸದರಿ ಕಟ್ಟಡಕ್ಕೆ ರಾಷ್ಟ್ರೀಯ ಕಟ್ಟಡದ ನಿಯಮಾವಳಿಗಳನ್ವಯ ಕಟ್ಟಡವನ್ನು ಪರಿಶೀಲಿಸಿ ದೃಢೀಕರಣ ಪತ್ರ ನೀಡುವಂತೆ ಉಲ್ಲೇಖ (4)ರ ತಮ್ಮ ಕಚೇರಿ ಪತ್ರದಲ್ಲಿ ಕೋರಲಾಗಿರುತ್ತದೆ. ಉಲ್ಲೇಖ (1)ರ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 19/09/2020ರಂದು ನಡೆದ ಸಭೆಯ ನಡವಳಿಗಳಲ್ಲಿ "ಈಗಾಗಲೇ ನಿರ್ಮಾಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural evalution) ಮೌಲ್ಯಮಾಪನ ಮಾಡಿಸಿ National buidling code ಮಾನದಂಡಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದುಕೊಳ್ಳತಕ್ಕದ್ದು" ಎಂದು ನಿರ್ದೇಶಿಸಲಾಗಿರುತ್ತದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಇ ಉಪವಿಭಾಗ, ದಾವಣಗೆರೆ ಇವರು ನೆಕ್ಸಜೆನ್ ಎಜುಕೇಷನಲ್ ಟ್ರಸ್ಟ, ದಾವಣಗೆರೆ ಸಂಸ್ಥೆಯ ವತಿಯಿಂದ ಶ್ರೀ ಚೈತನ್ಯ ಪಿ.ಯು. ಕಾಲೇಜ್, ದಾವಣಗೆರೆ ಸದರಿ ಕಟ್ಟಡಕ್ಕೆ ದಿನಾಂಕ : 24/07/2021ರಂದು ಭೇಟಿ ನೀಡಿ ಕಟ್ಟಡದ ವಿನ್ಯಾಸ ಮತ್ತು ನಕ್ಷೆಗಳನುಸಾರ ಪರಿವೀಕ್ಷಿಸಿರುತ್ತಾರೆ. ಸದರಿ ಕಟ್ಟಡವನ್ನು NBC 2016ರ ಮಾನದಂಡಗಳ ಅನುಸಾರ ನಿರ್ಮಿಸಲಾಗಿದ್ದು, ಕಟ್ಟಡವು ತಾಂತ್ರಿಕವಾಗಿ ಸದೃಢವಾಗಿದೆ ಎಂದು ದೃಢೀಕರಿಸಿ ಉಲ್ಲೇಖ (4)ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಇ ಉಪವಿಭಾಗ, ದಾವಣಗೆರೆ ಇವರು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ವಯ ಕಟ್ಟಡ ಸುರಕ್ಷಿತ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ದಾವಣಗೆರೆ.